# ಅಂಜಿಕಿನ್ಯಾತಕಯ್ಯ ಸಜ್ಜನರಿಗೆ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
4. **Note:** Lyrics given without highlights are as per Ref. 1. The wordings in Ref. 2 are similar to Ref. 1 with a mix of few wordings from Ref. 3. These differences of Ref. 2 are not considered here. The lyrics in Ref. 3 are given in yellow highlights.
5. **Note:** Singer has followed lyrics as in Ref. 1

| | |
|---|---|
| ರಾಗ: ಕಲ್ಯಾಣಿ ತಾಳ: ಅಟ | ರಾಗ: ಕಲ್ಯಾಣಿ ತಾಳ: ಅಟ |
| ಅಂಜಿಕಿನ್ಯಾತಕಯ್ಯ ಸಜ್ಜನರಿಗೆ<br>ಭಯವು ಇನ್ಯಾತಾಕಯ್ಯಾ ॥ ಪ ॥ | ಅಂಜಿಕಿನ್ನೇತಕಯ್ಯ ಸಜ್ಜನರಿಗೆ<br>ಅಂಜಿಕಿನ್ನೇತಕಯ್ಯ |
| ಸಂಜೀವರಾಯರ ಸ್ಮರಣೆ ಮಾಡಿದ ಮೇಲೆ ॥ ಅಪ ॥ | ಸಂಜೀವರಾಯರ ಸ್ಮರಣೆ ಮಾಡಿದ ಮೇಲೆ |
| ಕನಸಿಲಿ ಮನಸಿಲಿ ಕಳವಳವಾದರೆ<br>ಹನುಮನ ನೆನೆದರೆ ಹಾರಿ ಹೋಗದೆ ಭೀತಿ ॥ ೧ ॥ | ಕನಸಿನೊಳ್ ಮನಸಿನೊಳ್ ಕಳವಳ ವೇತಕೆ<br>ಹನುಮನ ನೆನೆದರೆ ಹಾರಿ ಹೋಹೊದು ಪಾಪ |
| ರೋಮ ರೋಮಕೆ ಕೋಟಿ ಲಿಂಗವುದುರಿಸಿದ<br>ಭೀಮನ ನೆನೆದರೆ ಬಿಟ್ಟು ಹೋಗದೆ ಭೀತಿ ॥ ೨ ॥ | ರೋಮ ರೋಮಕೆ ಕೋಟಿ ಲಿಂಗವುದುರಿಸಿದ<br>ಭೀಮನ ನೆನೆದರೆ ಬಿಟ್ಟು ಹೋಹೊದು ಪಾಪ |
| ಪುರಂದರ ವಿಠಲನ ಪೂಜೆಯ ಮಾಡುವ<br>ಗುರು ಮಧ್ವರಾಯರ ಸ್ಮರಣೆ ಮಾಡಿದ ಮೇಲೆ ॥ ೩ ॥ | ಪುರಂದರ ವಿಠಲನ ಪೂಜೆಯ ಮಾಡುವ<br>ಗುರು ಮಧ್ವರಾಯರ ಸ್ಮರಣೆ ಮಾಡಿದ ಮೇಲೆ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಸಂಜೀವರಾಯ** – ಮುಖ್ಯಪ್ರಾಣನ ಒಂದು ಹೆಸರು.

**ರೋಮ ರೋಮಕೆ ಕೋಟಿ ಲಿಂಗ –** ಪುರುಷಾಮೃಗವನ್ನು ಭೀಮನು ಹಸ್ತಿನಾವತಿಗೆ ತಂದ ಸಂದರ್ಭ. ಕತೆ ಆಗಲೇ ಬಂದಿದೆ. ಆದರೆ ಇಲ್ಲಿ ಈ ಪವಾಡವನ್ನು ತೋರಿದವನು ಭೀಮನೇ ಎಂದಿದೆ. ಮೊದಲು ಹೇಳಿದ ಕತೆಯಲ್ಲಿ ಹನುಮಂತನದು ಈ ಪವಾಡ.

**ಹನುಮಂತ ದೇವರ ಒಂದೊಂದು ರೋಮದಿಂದ ಕೋಟಿ ಲಿಂಗಗಳು** ಉದುರಿದ ಕಥೆಯು, ದಕ್ಷಿಣ ದೇಶದಲ್ಲಿ ಪ್ರಚಾರದಲ್ಲಿರುವ ಮಹಾಭಾರತದಲ್ಲಿ ಬರುತ್ತದೆ. ಇದನ್ನು ಕನ್ನಡ ಕವಿ ಕುಮಾರ ವ್ಯಾಸನು ತನ್ನ ಕೃತಿಯಲ್ಲಿ ಸ್ವೀಕರಿಸಿದ್ದಾನೆ. ಅದರ ವಿಷಯ ಹೀಗಿದೆ : -

ರಾಜಾಸೂಯ ಯಾಗದ ಕಾಲದಲ್ಲಿ ಶ್ರೀ ಕೃಷ್ಣನು ಧರ್ಮರಾಯನಿಗೆ ಉಚ್ಚಿಷ್ಟ ಶುದ್ಧಿಗಾಗಿ ಪುರುಷಾಮೃಗವನ್ನು ತರಲು ಹೇಳುತ್ತಾನೆ. ಆಗ ಅಣ್ಣನ ಅಪ್ಪಣೆಯಂತೆ ಭೀಮಸೇನನು ಆ ಮೃಗವನ್ನು ತರಲು ಹೊರಡುವನು. ದಾರಿಯಲ್ಲಿ ಭೆಟ್ಟಿಯಾದ ಹನುಮಂತನು ಉಗ್ರ ಶೈವ ಭಕ್ತಿಯನ್ನು ಭೀಮಸೇನನಿಗೆ ವಿವರಿಸಿ ಅದನ್ನು ಹಸ್ತಿನಾವತಿಯ ವರೆಗೆ ಕರೆತರಲು ಉಪಾಯವೆಂದು ತನ್ನ ರೋಮಗಳನ್ನು ಕೊಡುವನು. ಆ ರೋಮವನ್ನು ನೆಲಕ್ಕೆ ಚೆಲ್ಲಿದಾಗ ಕೋಟಿ ಲಿಂಗಗಳು ಉದ್ಭವಿಸುತ್ತಿದ್ದುವು. ಅದನ್ನು ಹಸ್ತಿನಾವತಿಯ ಪುರ ದ್ವಾರದವರೆಗೂ ಕರೆತರುವನು.

**Classification:** Keerthane
**Ankita:** purandara vittala
**Location:** NA
**Category:** Hanuma Stuti
**Sub-Category:** hanuma, bhima, madhva, madhwacharya, hanuma-bhima-madhva, shiva, bhaya, kanasu, mana, puje, smarane, papa,
**Pravachana:** NA
**Explanation:** NA